# ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ನಂ.ಹುಧಾಮಪಾ/50/ವಿನ್ಯಾಸ 09/2016-17/21 ದಿನಾಂಕ: 18 /11/2016

ವಿಷಯ:- ಹುಬ್ಬಳ್ಳಿ ತಾಲೂಕು ಗೋಪನಕೊಪ್ಪ ಗ್ರಾಮದ ರಿ.ಸ.ನಂ. 161/1+2ಕ & 162/1 ನೇದ್ದರ ಒಟ್ಟು ಕ್ಷೇತ್ರ 11ಎಕರೆ 11ಗುಂಟೆ ಪ್ರದೇಶದಲ್ಲಿನ ವಸತಿ ವಿನ್ಯಾಸವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳುವ ಕುರಿತು.

ಉಲ್ಲೇಖ:-1) ಮಾನ್ಯ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ: ಎಲ್.ಎನ್.ಎ/ಸಿಆರ್/332+333/2006-07 ದಿ: 11-04-2008

2) ವಿನ್ಯಾಸ ಅಂತಿಮ ಅನುಮೋದನೆ ನೀಡಿದ ಪತ್ರ ಸಂಖ್ಯೆ ಹು.ಧಾ.ನ.ಪ್ರಾ/ಯೋ.ವಿ/ವಿನ್ಯಾಸ/12/07-08/2016-17/188 ದಿನಾಂಕ: 14-07-2010

3) ವಿನ್ಯಾಸಕ್ಕೆ ಪ್ರಾಧಿಕಾರದಿಂದ ಅಭಿವೃದ್ಧಿ ಕಾಮಗಾರಿಗಳ ಮುಕ್ತಾಯ ಪ್ರಮಾಣ ಪತ್ರ ನೀಡಿದ ಪತ್ರ ಸಂ. ಹು.ಧಾ.ನ.ಪ್ರಾ/ಅ.ವಿ/ಗೋಪನಕೊಪ್ಪ/ಖಾ.ವಿ./2012-13/5302 ದಿನಾಂಕ: 21-02-2013

4) ದಿನಾಂಕ: 07-06-2016 ರ ನಗರ ಯೋಜನಾ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸಭೆಯ ವಿಷಯ ಸಂಖ್ಯೆ 09 ಠರಾವು ಸಂಖ್ಯೆ 196 ಮತ್ತು ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯ ದಿನಾಂಕ: 08-08-2016

---

**ಪೀಠಿಕೆ**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿ ತಾಲೂಕು ಗೋಪನಕೊಪ್ಪ ಗ್ರಾಮದ ರಿ.ಸ.ನಂ. 161/1+2ಕ & 162/1 ನೇದ್ದರ ಒಟ್ಟು ಕ್ಷೇತ್ರ 11ಎಕರೆ 11ಗುಂಟೆ ವಸತಿ ವಿನ್ಯಾಸವನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳುವ ಕುರಿತು ಉಲ್ಲೇಖ (1) ರನ್ವಯ ಸದರಿ ಜಮೀನುಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು ಭೂ ಪರಿವರ್ತನೆ ಆದೇಶ ನೀಡಿರುರುತ್ತಾರೆ. ಉಲ್ಲೇಖ (2) ರನ್ವಯ, ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಅಂಗೀಕರಿಸಿರುತ್ತಾರೆ. ಉಲ್ಲೇಖ (3) ರನ್ವಯ ಸದರಿ ವಸತಿ ವಿನ್ಯಾಸದ ಕಾಮಗಾರಿಗಳ ಬಗ್ಗೆ ಪ್ರಾಧಿಕಾರದ ಮೇಲ್ವಿಚಾರಣೆಯಲ್ಲಿ ತೃಪ್ತಿಕರವಾಗಿ ನಿರ್ವಹಿಸಿರುವುದಾಗಿ, ಪ್ರಾಧಿಕಾರದ ಮುಕ್ತಾಯ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತಾರೆ. ಸದರಿ ವಿನ್ಯಾಸದಲ್ಲಿ ಒಟ್ಟು 101 ವಸತಿ ನಿವೇಶನಗಳು ಇರುತ್ತವೆ. ವಿನ್ಯಾಸದಲ್ಲಿ ಇರುವ ರಸ್ತೆ ಹಾಗೂ ಖುಲ್ಲಾ ಜಾಗೆಗಳನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿದ್ದು ಮಹಾನಗರ ಪಾಲಿಕೆಯ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಅಧೀಕ್ಷಕ ಅಭಿಯಂತರರು ಮತ್ತು ನಗರ ಯೋಜನಾ ಜಂಟಿ ನಿರ್ದೇಶಕರು ಸ್ಥಳ ಪರಿಶೀಲಿಸಿ ಹಸ್ತಾಂತರಿಸಿಕೊಳ್ಳಲು ಅಭಿಪ್ರಾಯ ನೀಡಿರುತ್ತಾರೆ. ಉಲ್ಲೇಖ (4) ರನ್ವಯ ದಿನಾಂಕ: 07-06-2016 ರ ಮಹಾನಗರ ಪಾಲಿಕೆಯ ನಗರ ಯೋಜನಾ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸಭೆಯ ವಿಷಯ ಸಂಖ್ಯೆ 09 ಠರಾವ ನಂ. 196 ರನ್ವಯ ಅರ್ಜಿದಾರರು ರೂ. 6,45,050/- ಶುಲ್ಕವನ್ನು ಚಲನ ನಂ. 42 ದಿನಾಂಕ: 07-11-2016 ರಂದು ಕೆನರಾ ಬ್ಯಾಂಕ್, ಕೊಪ್ಪಿಕರ ರೋಡ. ಹುಬ್ಬಳ್ಳಿ ಪಾಲಿಕೆಯ ಖಾತೆಗೆ ಭರಿಸಿರುತ್ತಾರೆ. ಆದ್ದರಿಂದ ಸದರಿ ವಸತಿ ವಿನ್ಯಾಸವನ್ನು ಈ ಕೆಳಗಿನ ಕರಾರುಗಳಿಗೆ ಒಳಪಟ್ಟು ಹಸ್ತಾಂತರಿಸಿಕೊಳ್ಳಬಹುದಾಗಿರುತ್ತದೆ.

**ಹಸ್ತಾಂತರ ಪತ್ರ**

ಕೆಳಕಂಡ ಕರಾರುಗಳನ್ನು ವಿಧಿಸಿ ನಗರ ಯೋಜನಾ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸಭೆ ಮತ್ತು ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯ ನಿರ್ಣಯದಂತೆ ವಸತಿ ವಿನ್ಯಾಸದ ನಕ್ಷೆಯನ್ನು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಲಾಗಿದೆ.

## ಕರಾರುಗಳು:

1) ವಿನ್ಯಾಸದಲ್ಲಿನ ವಸತಿ ನಿವೇಶನಗಳಿಗೆ ಸಂಭಂದಪಟ್ಟ ಎಲ್ಲ ಶುಲ್ಕವನ್ನು ತುಂಬಿ ಸಂಭಂದಿಸಿದ ವಲಯ ಕಚೇರಿಯ ಸಹಾಯಕ ಆಯುಕ್ತರರಿಂದ ಖಾತೆಗಳನ್ನು ಪಡೆಯತಕ್ಕದ್ದು.
2) ಸದರಿಯವರು ವಸತಿ ವಿನ್ಯಾಸದಲ್ಲಿ ನೀರು ಸರಬರಾಜು ಜಾಲಗಳನ್ನು ಹಾಕಿದ್ದು ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ ಇದರಲ್ಲಿ ಏನೇ ಲೋಪ ದೋಷಗಳು ಬಂದರೆ ದುರಸ್ತಿ ಮಾಡಿಕೊಡುವ ಕುರಿತು ಇಲ್ಲವೆ ತಿಳಿಸಿದಷ್ಟು ಹಣವನ್ನು (15 ದಿನಗಳಲ್ಲಿ) ತುಂಬುವದಾಗಿ ನಷ್ಟ ಭರ್ತಿ ಬಾಂಡದಲ್ಲಿ ಪ್ರಮಾಣ ಪತ್ರದಂತೆ ಬದ್ಧರಾಗಿರತಕ್ಕದ್ದು.
3) ಸದರಿ ವಸತಿ ವಿನ್ಯಾಸದಲ್ಲಿ ಎಲ್ಲಾ ನಿವೇಶನದಾರರಿಗೆ ಸಾಕಾಗುವಷ್ಟು ನೀರು ಸರಬರಾಜು ಕುರಿತು ಬೋರವೆಲ್ ಹಾಕಿ ಪಂಪ ಅಳವಡಿಸಿ ನೀರು ಸರಬರಾಜು ಮಾಡಬೇಕು. ಶೇಕಡ 80% ರಷ್ಟು ಮನೆಗಳು ಬರುವವರೆಗೆ ಬೋರವೆಲ್‌ದಿಂದ ನೀರು ಪೂರೈಸಬೇಕು. ಹಾಗೂ ಪಾಲಿಕೆಯು ಕೇಳಿದಾಗ ಬೋರವೆಲ್ ಪಂಪ್ ಸಮೇತ ಮುಕ್ತಟಿಯಾಗಿ ಪಾಲಿಕೆಗೆ ಹಸ್ತಾಂತರಿಸಬೇಕು.
4) ಸದರಿ ವಸತಿ ವಿನ್ಯಾಸದಲ್ಲಿ ಬರುವ ಎಲ್ಲಾ ರಸ್ತೆಗಳಿಗೆ ಡಾಂಬರೀಕರಣ ಮಾಡಿರುತ್ತಾರೆ. ಹಾಗೂ 2 (ಎರಡು) ವರ್ಷದವರೆಗೆ ಉಸ್ತುವಾರಿ ಮಾಡಬೇಕು.
5) ಈಗಾಗಲೇ ವಿನ್ಯಾಸದಲ್ಲಿ ಸಾಲು ಮರಗಳನ್ನು ನೆಟ್ಟಿರುವುದರಿಂದ ಅವುಗಳ ಸಂರಕ್ಷಣೆಗಾಗಿ ಟ್ರೀಗಾರ್ಡ್‌ಗಳನ್ನು ಅಳವಡಿಸಿದ್ದರಿಂದ ಹಾಳಾಗಿರುವ ಟ್ರೀಗಾರ್ಡ್‌ಗಳನ್ನು ಸರಿಪಡಿಸತಕ್ಕದ್ದು. ಈ ಕುರಿತು ಅರಣ್ಯ ಇಲಾಖೆಗೆ ಏನಾದರೂ ಶುಲ್ಕ ಭರಣಾ ಮಾಡುವುದು ಬಂದಲ್ಲಿ ಅದನ್ನು ವಿನ್ಯಾಸದ ಮಾಲೀಕರೇ ತುಂಬಬೇಕು.
6) ಸದರಿ ವಸತಿ ವಿನ್ಯಾಸದಲ್ಲಿಯ ನಾಗರೀಕರು ಯಾವುದೇ ರೀತಿಯ ಹೆಚ್ಚಿನ ಪೌರ ಸೌಲಭ್ಯಗಳನ್ನು ಕೇಳಿದಲ್ಲಿ ಅವುಗಳನ್ನು ವಿನ್ಯಾಸದ ಮಾಲೀಕರೇ ತಮ್ಮ ಸ್ವಂತ ಖರ್ಚಿನಿಂದ ಮಾಡಿಸಿಕೊಡಬೇಕು.
7) ಎಲ್ಲ ರಸ್ತೆಗಳಿಗೆ ನಾಮಫಲಕ ಹಾಗೂ ಮಿನಿಚರ್ ಬೋರ್ಡ ಹಾಕಲಾಗಿದೆ.
8) ಸದರಿ ವಸತಿ ವಿನ್ಯಾಸದಲ್ಲಿ ಒಳಚರಂಡಿ ಕೊಳವೆಗಳನ್ನು ಮಹಾನಗರ ಪಾಲಿಕೆಯ ಮುಖ್ಯ ಕೊಳವೆಗೆ ಜೋಡಿಸುವವರೆಗೆ ಎಲ್ಲ ನಿವೇಶನದಾರರು ವೈಯಕ್ತಿಕ ಸೆಪ್ಟಿಕ್ ಟ್ಯಾಂಕ್ ಕಟ್ಟಿಸಬೇಕು.
9) ಸದರಿ ವಸತಿ ವಿನ್ಯಾಸದಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಿದ್ದಾರೆ. ವಿದ್ಯುತ್ ಜೋಡಣೆಯ ಶುಲ್ಕ ತುಂಬಿಸಿಕೊಳ್ಳಲಾಗಿದೆ. ಹಾಗೂ ಶೇಕಡ 80% ರಷ್ಟು ಮನೆಗಳು ನಿರ್ಮಾಣವಾಗುವವರೆಗೆ ಬೀದಿ ದೀಪಗಳ ಸಂರಕ್ಷಣೆಯು ವಿನ್ಯಾಸದ ಮಾಲೀಕರೇ ಮಾಡಬೇಕು. ಹಾಗೂ ವಿದ್ಯುತ್ ಸರಬರಾಜು ಕುರಿತು ಹೆಸ್ಕಾಂಗೆ ಶುಲ್ಕ ತುಂಬುವುದು ಬಂದಲ್ಲಿ ವಿನ್ಯಾಸದ ಮಾಲೀಕರೇ ತುಂಬಬೇಕು. ನೀರು ಸಂಪರ್ಕ ಪಡೆಯಲು ನಿವೇಶನದಾರರು ಪ್ರೋರೇಟಾ ಶುಲ್ಕ ತುಂಬಬೇಕು.
10) ಸದರಿ ಸಿವ್ಹಿಲ್ ಕಾಮಗಾರಿಗಳ ಬಗ್ಗೆ ಮತ್ತು ಇತರ ಕಾಮಗಾರಿಗಳ ಬಗ್ಗೆ ವಿನ್ಯಾಸದ ಮಾಲೀಕರೆ ಹೊಣೆಗಾರರು ಈ ಕುರಿತು ನಷ್ಟ ಭತಿ ಃಪ್ರಮಾಣ ಪತ್ರ ನೀಡಿ ಅದಕ್ಕೆ ಬದ್ಧರಾಗಿರತಕ್ಕದ್ದು.
11) ಸದರ ವಿನ್ಯಾಸದಲ್ಲಿ ಸಿವ್ಹಿಲ್ ಕಾಮಗಾರಿಗಳನ್ನು ಮುಗಿಸಿದ್ದು, ಪ್ರತಿಶತ ಶೇಕಡಾ 80 ರಷ್ಟು ಮನೆಗಳು ನಿರ್ಮಾಣ ಆಗುವವರೆಗೆ ವಿನ್ಯಾಸದ ಮಾಲೀಕರು ತಮ್ಮ ಸ್ವಂತ ಖರ್ಚಿನಿಂದ ದುರಸ್ಥಿ ಮಾಡಬೇಕು
12) ಸದರ ವಿನ್ಯಾಸ ಹಸ್ತಾಂತರವಾದ ನಂತರ ಯಾವುದೇ ತರಹದ-ಲೆಕ್ಕ ಪರಿಶೋಧಕರ ಆಕ್ಷೇಪಣೆಗಳು ಬಂದಲ್ಲಿ ಸದರ ಆಕ್ಷೇಪಣೆಗೆ ತಗಲಬಹುದಾದ ವೆಚ್ಚವನ್ನು ವಿನ್ಯಾಸದ ಮಾಲೀಕರೇ ಭರಿಸಬೇಕಾಗುತ್ತದೆ. ಈ ಬಗ್ಗೆ ಮುಚ್ಚಳಿಕೆ ಪತ್ರ ನೀಡಿದ್ದಾರೆ.
13) ಸದರಿ ವಿನ್ಯಾಸದಲ್ಲಿಯ ವಿದ್ಯುತ್ ಮೀಟರಗಳನ್ನು ಮಾನ್ಯ ಆಯುಕ್ತರು, ಹು.ಧಾ.ಮ.ಪಾ. ಹುಬ್ಬಳ್ಳಿ ಇವರ ಹೆಸರಿಗೆ ವರ್ಗಾಯಿಸಿ ವಿನ್ಯಾಸದ ಮಾಲೀಕರೇ ಕೊಡಬೇಕು.

18/11/14

ಆಯುಕ್ತರು
ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ
ಹುಬ್ಬಳ್ಳಿ

**ಪ್ರತಿಗಳು:-**

1) ಆಯುಕ್ತರು ಹು-ಧಾ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ ಇವರಿಗೆ ಅಭಿನಂದನೆಗಳೊಂದಿಗೆ ಮಾಹಿತಿಗಾಗಿ
2) ಜಂಟಿ ಆಯುಕ್ತರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ಇವರಿಗೆ ಅಭಿನಂದನೆಗಳೊಂದಿಗೆ ಮಾಹಿತಿಗಾಗಿ.
3) ಜಂಟಿ ನಿರ್ದೇಶಕರು, ನಗರ ಯೋಜನೆ ವಿಭಾಗ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ಇವರಿಗೆ ಅಭಿನಂದನೆಗಳೊಂದಿಗೆ ಮಾಹಿತಿಗಾಗಿ
4) ಕಾರ್ಯನಿರ್ವಾಹಕ ಅಭಿಯಂತರರು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ಇವರಿಗೆ ಅಭಿನಂದನೆಗಳೊಂದಿಗೆ ಮಾಹಿತಿಗಾಗಿ
5) ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ಜಲ ಮಂಡಳಿ (ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ) ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ
6) ಕಾರ್ಯ ನಿರ್ವಾಹಕ ಅಭಿಯಂತರರು, ವಿದ್ಯುತ್ ವಿಭಾಗ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ ಇವರಿಗೆ ಅಭಿನಂದನೆಗಳೊಂದಿಗೆ ಮಾಹಿತಿಗಾಗಿ
7) ಸಹಾಯಕ ಆಯುಕ್ತರು, ವಲಯ ಕಚೇರಿ ಸಂಖ್ಯೆ 06 ಸದರಿ ವಸತಿ ವಿನ್ಯಾಸದಲ್ಲಿನ ಎಲ್ಲ ನಿವೇಶನಗಳಿಗೆ ಸಂಭಂದಪಟ್ಟ ಶುಲ್ಕವನ್ನು ಪಾವತಿಸಿಕೊಂಡ ನಂತರ ಖಾತೆಯನ್ನು ತೆರೆಯತಕ್ಕದ್ದು
8) ಸಹಾಯಕ ನಿರ್ದೇಶಕರು ತೋಟಗಾರಿಕೆ ಇಲಾಖೆ, ಹು.ಧಾ.ಮ.ಪಾಲಿಕೆ, ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ
9) ಶ್ರೀ. ಅಲ್ತಾಫ ಮೂಸಾ ಶೇಖ, ಒಟ್ಟು ಮೋಕ್ತಿಯಾರರು, ಮಿಡ್‌ಮ್ಯಾಕ್ ಡೆವಲಪರ್ಸ್, ಜೆ.ಸಿ. ನಗರ, ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.